(ಸಾಕ್ಷಿಯನ್ನು ದಿನಾಂಕಃ 06.02.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ವಾದಿ ಪರಃ ಶ್ರೀ H M ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣಪತ್ರವನ್ನು ಸಲ್ಲಿಸುತ್ತಿದ್ದು, ಪ್ರಮಾಣಪತ್ರಿಕೆಯಲ್ಲಿ ಬರೆಸಿರುವ ವಿಷಯಗಳೆಲ್ಲವೂ ಸತ್ಯವಾಗಿದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿದ್ದೇನೆ.

ಎಲ್ಲೇಗೌಡರವರು ಅಂಕೇಗೌಡರವರಿಗೆ ದಿನಾಂಕಃ 23.06.2015 ರಂದು ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ, ಸದರೀ ದಾನಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದೆ. ಸದರೀ ದಾನಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸದರೀ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 2 ಎ ಎಂದು ಗುರುತಿಸಲಾಯಿತು. ಸದರೀ ದಾನಪತ್ರಕ್ಕೆ ನನ್ನ ಜೊತೆ ಇನ್ನೊಬ್ಬರು ಸಹಿ ಮಾಡಿರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ಸದರೀ ದಾನಪತ್ರಕ್ಕೆ ಅಂಕೇಗೌಡರು ಹೆಬ್ಬೆಟ್ಟನ್ನು ಹಾಕಿರುತ್ತಾರೆ, ಎಲ್ಲೇಗೌಡರು ಸಹಿಯನ್ನು ಮಾಡಿರುತ್ತಾರೆ. ಸದರೀ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರುಃ ಶ್ರೀ ಪಿ ಎಸ್ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ತನಕ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನಾನು ಸ್ಟ್ಯಾಂಪ್ ವೆಂಡರ್ ಹತ್ತಿರ ಕೆಲಸ ಮಾಡಿಕೊಂಡಿದ್ದೇನೆ. ನಾನು ಶ್ರೀಕಂಠಯ್ಯ ಎಂಬುವವರ ಬಳಿ ಕೆಲಸ ಮಾಡುತ್ತಿದ್ದೇನೆ. ನಾನು ಅವರ ಬಳಿ ಸುಮಾರು 13-14 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಎಲ್ಲಾ ದಾಖಲೆಗಳನ್ನು ನೀವೇ ಪರಿಶೀಲನೆ ಮಾಡುತ್ತೀರಿ ಎಂದರೆ ಸರಿ. ಎಲ್ಲಾ ಕ್ರಯಪತ್ರ ಮತ್ತು ದಾನಪತ್ರಗಳನ್ನು ನೀವೇ ಬರೆಯುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಶ್ರೀಕಂಠಯ್ಯರವರು ಬರೆಯುತ್ತಾರೆ, ನಾನು ಅವುಗಳನ್ನು ಪರಿಶೀಲನೆ ಮಾಡುತ್ತೇನೆ. ಯಾವ ಪತ್ರಕ್ಕೆ ಏನೇನು ದಾಖಲೆಗಳು ಬೇಕು ಎಂದು ನಿಮಗೆ ಗೊತ್ತು ಎಂದರೆ ಸರಿ. ಯಾವ ಆಸ್ತಿಗಳು ಸ್ವಯಾರ್ಜಿತ, ಯಾವ ಆಸ್ತಿಗಳು ಪಿತ್ರಾರ್ಜಿತ ಎಂಬುದು ನಿಮಗೆ ಗೊತ್ತಾಗುತ್ತದೆಯೆಂದರೆ ಸರಿ. ನನಗೆ ಅಂಕೇಗೌಡ ಮತ್ತು ಎಲ್ಲೇಗೌಡ ಗೆಜ್ಜಲಗೆರೆಯ ನಮ್ಮ ಸ್ನೇಹಿತರಿಂದ ನನಗೆ ಪರಿಚಯವಿರುತ್ತಾರೆ. ಅವರು ನನಗೆ ಸುಮಾರು 10-15 ವರ್ಷಗಳಿಂದ ಪರಿಚಯವಿರುತ್ತಾರೆ. ಸದರೀಯವರು ನನಗೆ 10-15 ವರ್ಷಗಳಿಂದ ಪರಿಚಯವಿರುತ್ತಾರೆಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತಿಳಿಸಿರುವುದಿಲ್ಲ.

ಅಂಕೇಗೌಡರು ಗೆಜ್ಜಲಗೆರೆ ಗ್ರಾಮದವರು. ಯಾವುದೇ ದಾಖಲೆಯನ್ನು ನೋಂದಣಿ ಮಾಡಿಸಬೇಕಾದರೆ, ಸದರೀ ವ್ಯಕ್ತಿಗಳ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಮತ್ತು ಇತರೇ ದಾಖಲೆಗಳನ್ನು ಪರಿಶೀಲನೆ ಮಾಡುತ್ತೀರಿ ಎಂದರೆ ಸರಿ. ಎಲ್ಲೇಗೌಡರೂ ಕೂಡ ಗೆಜ್ಜಲಗೆರೆ ಗ್ರಾಮಕ್ಕೆ ಸೇರಿದವರು. ಅಂಕೇಗೌಡರು ಬದುಕಿದ್ದಾರೆಂದರೆ ಸರಿ. ಅಂಕೇಗೌಡರು ಗೆಜ್ಜಲಗೆರೆಯಲ್ಲಿ ವಾಸವಾಗಿದ್ದಾರೆ. ನಾನು ಅವರ ಚುನಾವಣಾ ಗುರುತಿನ ಚೀಟಿಯನ್ನು ನೋಡಿರುತ್ತೇನೆ. ಸದರೀ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಸದರೀ ಅಂಕೇಗೌಡ ಮತ್ತು ಎಲ್ಲೇಗೌಡರು ಮೊದಲಿಗೆ ಸ್ಟ್ಯಾಂಪ್ ವೆಂಡರ್ ಆದ ಚೆಲುವರಾಜುರವರ ಬಳಿ ಬಂದಿರುತ್ತಾರೆ. ಆ ಸಮಯದಲ್ಲಿ ನಾವೂ ಕೂಡ ಅಲ್ಲಿಯೇ ಇದ್ದೆವು. ಆ ಸಮಯದಲ್ಲಿ ಚೆಲುವರಾಜುರವರು ಸದರೀ ಅಂಕೇಗೌಡ ಮತ್ತು ಎಲ್ಲೇಗೌಡರವರನ್ನು ಕೇಳಿರುತ್ತಾರೆ. ನಾವು ಸದರೀ ಅಂಕೇಗೌಡ ಮತ್ತು ಎಲ್ಲೇಗೌಡರಿಗೆ ಸೇರಿದ ದಾಖಲೆಗಳನ್ನು ನೋಡಿರುತ್ತೇವೆ. ಸದರೀ ಎಲ್ಲೆಗೌಡ ಮತ್ತು ಅಂಕೇಗೌಡರು ನಮಗೆ ಮತದಾರರ ಚುನಾವಣಾ ಗುರುತಿನ ಚೀಟಿ, ಈ ಸೊತ್ತು ದಾಖಲೆಗಳನ್ನು ನೀಡಿರುತ್ತಾರೆ. ಸದರೀ ಆಸ್ತಿ ಹೇಗೆ ಬಂತು ಎಂದು ನೀವು ಎಲ್ಲೇಗೌಡರನ್ನು ಕೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಸದರೀ ಆಸ್ತಿ ಹೇಗೆ ಬಂತು ಎಂದು ನಾನು ಮತ್ತು ಚೆಲುವರಾಜುರವರು ಎಲ್ಲೇಗೌಡರನ್ನು ಕೇಳಿರುವುದಿಲ್ಲ. ಎಲೇಗೌಡರು ನೀಡಿದ ದಾಖಲೆಗಳ ಆಧಾರದ ಮೇಲೆ ನಾವು ದಾನಪತ್ರವನ್ನು ತಯಾರು ಮಾಡಿರುತ್ತೇವೆ. ಈ ಸ್ವತ್ತಿನಲ್ಲಿ ಸದರೀ ಆಸ್ತಿ ಹೇಗೆ ಬಂತು ಎಂದು ನಮೂದು ಮಾಡಿರುತ್ತಾರೆಂದರೆ ಸರಿ. ಸದರೀ ಆಸ್ತಿ ಹೇಗೆ ಬಂತು ಎಂದು ನಾನು ಗಮನಿಸಿರುವುದಿಲ್ಲ.

ನೀವು ಪತ್ರಬರಹಗಾರರ ಸಹಾಯಕರಾಗಿರುವ ಕಾರಣ ಎಲ್ಲಾ ದಾಖಲೆಗಳನ್ನು ನೋಡಿರುತ್ತೀರಿ ಎಂದರೆ ಸರಿ. ನೀವು ಹಲವಾರು ದಾನಪತ್ರಗಳು ಮತ್ತು ಕ್ರಯಪತ್ರಗಳನ್ನು ಮಾಡಿದ್ದೀರಿ ಎಂದರೆ ಸರಿ. ಸರ್ಕಾರದಿಂದ ಯಾವುದೇ ಆಸ್ತಿ ಒಬ್ಬ ವ್ಯಕ್ತಿಗೆ ಮಂಜೂರಾದರೆ ಅದು, ಆತನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಮಂಜೂರಾತಿ ಪತ್ರದ ಆದೇಶದ ಹಿಂಭಾಗದಲ್ಲಿ ಶರತ್ತುಗಳನ್ನು ನಮೂದು ಮಾಡಿರುತ್ತಾರೆ, ಅವುಗಳನ್ನು ನೀವು ಓದಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಎಲ್ಲೇಗೌಡರಿಗೆ ಹೆಂಡತಿ ಮತ್ತು ಮಕ್ಕಳು, ಇದ್ದಾರಾ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಲ್ಲೇಗೌಡರು ನಿಮಗೆ ಪರಿಚಯವಾದಾಗ, ಅವರಿಗೆ ಹೆಂಡತಿ ಮತ್ತು ಮಕ್ಕಳು ಇದ್ದಾರಾ ಎಂದು ನೀವು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಸದರೀ ವಿಚಾರವನ್ನು ಅವರನ್ನು ಕೇಳಲು, ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರೀ ದಾನಪತ್ರವನ್ನು

ಬೆರಳಚ್ಚು ಮಾಡಿದ ಸಂದರ್ಭದಲ್ಲಿ ನಾನೂ ಕೂಡ ಅಲ್ಲಿಯೇ ಇದ್ದೆ. ನೀವು ಈ ಮೇಲೆ ಹೇಳಿದ ಎರಡು ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಇದೆಯಾ ಎಂದು ಕೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಯಾವ ಉದ್ದೇಶಕ್ಕಾಗಿ ದಾನಪತ್ರವನ್ನು ಬರೆಯುತ್ತಿದ್ದೀರಿ ಎಂದು ನೀವು ಎಲ್ಲೇಗೌಡರನ್ನು ಕೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಪತ್ರವನ್ನು ಬೆರಳಚ್ಚು ಮಾಡಿದ ನಂತರ ನಾನು ಸಾಕ್ಷಿ ದಾರನಾಗಿ ಸಹಿ ಹಾಕಿರುತ್ತೇನೆ. ಅಂಕೇಗೌಡರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಯಾವುದೇ ಪತ್ರವನ್ನು ಓದಿ ನಾನು ಸಹಿಯನ್ನು ಮಾಡುತ್ತೇನೆ. ಯಾವುದೇ ಒಬ್ಬ ವ್ಯಕ್ತಿ ಒಂದು ಪತ್ರಕ್ಕೆ ಸಹಿ ಮಾಡಿ ಎಂದರೆ ಸಹಿ ಮಾಡುತ್ತೀರಾ ಎಂದರೆ ಸಾಕ್ಷಿ ಪರಿಚಯವಿಲ್ಲದೇ ಸಹಿ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಜೊತೆ ಸಹಿ ಮಾಡಿದ ಇನ್ನೊಬ್ಬ ಸಾಕ್ಷಿದಾರನ ಹೆಸರು ನನಗೆ ಗೊತ್ತಿಲ್ಲ. ಎಲ್ಲೇಗೌಡರು ಮತ್ತು ಅಂಕೇಗೌಡರು ಯಾವ ಊರಿನಲ್ಲಿ ವಾಸವಾಗಿದ್ದಾರೆಂದು ಇಂದಿಗೂ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೆಜ್ಜಲಗೆರೆ ಗ್ರಾಮದಲ್ಲಿ ವಾಸವಾಗಿದ್ದಾರೆಂದು ನುಡಿಯುತ್ತಾರೆ. ಸದರೀ ಎಲ್ಲೆಗೌಡ ಮತ್ತು ಅಂಕೇಗೌಡರು ಮೊಬ್ಬಲಗೆರೆ ಗ್ರಾಮದಲ್ಲಿ ವಾಸವಾಗಿದ್ದಾರೆಂದರೆ ಸರಿಯಲ್ಲ. ಅಂಕೇಗೌಡರಿಗೆ ಸೇರಿದ ಆಧಾರಕಾರ್ಡ್ ಮತ್ತು ಪಾನ್ ಕಾರ್ಡ್ ನಲ್ಲಿ ಆತನ ವಿಳಾಸ ಮೊಬ್ಬಲಗೆರೆ ಎಂದು ಇರುತ್ತದೆಯೆಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗೆಜ್ಜಲಗೆರೆ ಕಾಲೋನಿಯಲ್ಲಿ ಅಂಕೇಗೌಡರಿಗೆ ಯಾವುದೇ ಮನೆ ಮತ್ತು ಆಸ್ತಿಗಳು ಇಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಎರಡನೇ ವಾದಿಯವರ ಮಾತು ಕೇಳಿಕೊಂಡು ಅಂಕೇಗೌಡ ಮತ್ತು ಎಲ್ಲೆಗೌಡರು ಗೆಜ್ಜಲಗೆರೆಯಲ್ಲಿ ವಾಸವಾಗಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಕೀಲರು ನನಗೆ ಹೇಳಿದ ಕಾರಣ ನಾನು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನ್ಯಾಯಾಲಯದಿಂದ ನನಗೆ ನೋಟೀಸ್ ಬಂದಿಲ್ಲ. ವಿಚಾರಣೆ ಹೇಳಬೇಕೆಂದು ನ್ಯಾಯಾಲಯದವರು ನಮಗೆ ತಿಳಿಸಿರುವುದಿಲ್ಲ. ಎಲ್ಲೆಗೌಡ ಮತ್ತು ಅಂಕೇಗೌಡರ ಆಸ್ತಿಗಳ ಬಗ್ಗೆ ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ ಮದ್ದೂರು.